**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಸಿ.ಸಿ ನಂ : 1/2025**

**ಚಾ.ಸಾಃ 6, ಫ್ರಾ.ಸಾಃ 7**

| | |
|---|---|
| ಸಾಕ್ಷಿದಾರನ ಹೆಸರು | ಅಸ್ಲಮ್ ಖಾನ್ |
| ತಂದೆಯ ಹೆಸರು | ಬುಡಾನ್ ಖಾನ್ |
| ವಯಸ್ಸು | 47 ವರ್ಷಗಳು |
| ಉದ್ಯೋಗ | ಕೂಲಿ |
| ವಾಸ್ತವ್ಯ | ಸರಳಗಿ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ.

ದಿನಾಂಕಃ 28-06-2024 ರಂದು ನಾನು ಮತ್ತು ಚಾ.ಸಾ. 7 ಬೈಕಿನಲ್ಲಿ ಸಿದ್ದಾಪುರಕ್ಕೆ ಹೋಗಲು ಹೋಗುತ್ತಿದ್ದೆವು. ಬೈಕನ್ನು ನಾನು ಓಡಿಸುತ್ತಿದ್ದೆ. ಸಂಜೆ 4.30 ರ ಸಮಯಕ್ಕೆ ಗೇರುಸೊಪ್ಪ ಡ್ಯಾಮ ಹತ್ತಿರ ಹೋಗುತ್ತಿದ್ದಾಗ ನಮ್ಮ ಮುಂಭಾಗದಲ್ಲಿ ಒಂದು ಓಮಿನಿ ಕಾರ ಹೋಗುತ್ತಿತ್ತು. ಆ ಕಾಲಕ್ಕೆ ಎದುರಿನಿಂದ ಒಂದು ಮಿನಿ ಬಸ್ಸ ಬರುತ್ತಿದ್ದು, ಬಸ್ಸ ಚಾಲಕ ಬಸ್ಸನ್ನು ಎಡಭಾಗಕ್ಕೆ ತಿರುಗಿಸಿ ನಮ್ಮ ಮುಂದೆ ಹೋಗುತ್ತಿದ್ದ ಓಮಿನಿ ಕಾರಗೆ ಡಿಕ್ಕಿಪಡಿಸಿರುತ್ತದೆ. ನಾವು ಬೈಕ್ ನಿಲ್ಲಿಸಿ ನೋಡಲಾಗಿ ಓಮಿನಿ ಚಾಲಕನಿಗೆ ತುಂಬಾ ಗಾಯಗಳಾಗಿದ್ದವು. ಆತನ ಜೊತೆ ಆತನ ಹೆಂಡತಿ ಸಹ ಇದ್ದು, ಆಕೆಗೂ ಸಹ ಗಾಯಗಳಾಗಿದ್ದವು. ತಕ್ಷಣ ನಾವು ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಬಂದೆವು. ನಂತರ ಅವರನ್ನು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ತದ ನಂತರ ಓಮಿನಿ ಚಾಲಕ ಮೃತಪಟ್ಟ ವಿಚಾರ ಗೊತ್ತಾಯಿತು.

ಅಪಘಾತಪಡಿಸಿದ ಬಸ್ ಚಾಲಕನನ್ನು ನೋಡಿದ್ದು, ಆತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಮಿನಿ ಬಸ್ಸ ಚಾಲಕ ಬಸ್ಸನ್ನು ವೇಗವಾಗಿ ಚಾಲಯಿಸಿಕೊಂಡು ಎಡ ಭಾಗದಲ್ಲಿ ಬರುತ್ತಿದ್ದವರು ರಸ್ತೆಯ ಬಲಭಾಗಕ್ಕೆ ತಿರುಗಿಸಿ ಎದುರಿಗೆ ಹೋಗುತ್ತಿದ್ದ ಓಮಿನಿ ಕಾರಿಗೆ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿದ್ದು, ಬಸ್ಸ ಚಾಲಕನ ತಪ್ಪಿಂದಲೇ ಅಪಘಾತ ಆಗಿರುತ್ತದೆ. ಸದ್ರಿ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ. ಎಲ್ ನಾಯ್ಕರವರಿಂದಃ**

ನನಗೆ ಕನ್ನಡ ಓದಲು ಬರೆಯಲು ಸಂಪೂರ್ಣವಾಗಿ ಬರುವುದಿಲ್ಲ, ಸ್ವಲ್ಪಸ್ವಲ್ಪ ಬರುತ್ತದೆ. ನಾನು 4 ನೇ ತರಗತಿವರೆಗೆ ಉರ್ದು ಭಾಷೆಯಲ್ಲಿ ಓದಿದ್ದೇನೆ. ಅಪಘಾತದ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿದ್ದಾರೆ. ಪೋಲೀಸರು ನನ್ನನ್ನು ಅಪಘಾತ ಆದ ದಿನವೇ ಘಟನಾ ಸ್ಥಳದಲ್ಲಿ ಸಂಜೆ 04-30 ರ ಸಮಯದಲ್ಲಿ ವಿಚಾರಣೆ ಮಾಡಿರುತ್ತಾರೆ. ಪೋಲೀಸರು ನನ್ನನ್ನು ವಿಚಾರಿಸಿದಾಗ ಅಪಘಾತ

ಹೇಗಾಯಿತು ಎಂದು ನಾನು ಹೇಳಿದ್ದೇನೆ. ಹೇಳಿಕೆಯನ್ನು ಬರೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಗೇರುಸೊಪ್ಪಾ ಚಕ್ ಪೋಸ್ಟನಲ್ಲಿದ್ದ ಪೋಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಹೊನ್ನಾವರ ಗೇರುಸೊಪ್ಪಾ ರಸ್ತೆಯಲ್ಲಿ ಬಹಳಷ್ಟು ಸಾರಿ ನಾನು ತಿರುಗಾಡಿದ್ದೇನೆ. ಆ ದಿನ ಸಿದ್ದಾಪುರಕ್ಕೆ ನಾನು ವೈಯಕ್ತಿಕ ಕೆಲಸಕ್ಕೆ ಹೋಗುತ್ತಿದ್ದೆ. ಸಿದ್ದಾಪುರಕ್ಕೆ ಹೋಗುತ್ತಿದ್ದುದನ್ನು ನಾನು ಬಾಯಿಮಾತಿನ ಮೂಲಕ ಹೇಳಿದ್ದೇನೆ. ಅದನ್ನು ಹೊರತುಪಡಿಸಿ ದಾಖಲೆ ಇಲ್ಲ. ಓಮಿನಿ ಕಾರು ನಮ್ಮ ಮುಂದೆ ಹೋಗುತ್ತಿತ್ತು. ಅದು ನಮ್ಮನ್ನು ಓವರಟೇಕ್ ಮಾಡಿ ಹೋಗಿರಲಿಲ್ಲ. ಓಮಿನಿ ಕಾರು ನಮ್ಮಿಂದ ಸುಮಾರು 50 ಮೀಟರ್ ದೂರದಲ್ಲಿ ಹೋಗುತ್ತಿತ್ತು. ಮಿನಿ ಬಸ್ಸು ರಾಂಗ್ ಸೈಡಿನಲ್ಲಿ ಬಂದು ಓಮಿನಿಗೆ ಡಿಕ್ಕಿಪಡಿಸಿದಾಗ ಬಸ್ಸನ್ನು ನೋಡಿದ್ದೇನೆ. ಅದಕ್ಕೂ ಪೂರ್ವದಲ್ಲಿ ಬಸ್ಸನ್ನು ನೋಡಲಿಲ್ಲ. ರಾಂಗ್ ಸೈಡಿಗೆ ಬರುತ್ತಿದ್ದುದನ್ನು ಸುಮಾರು 60 ಮೀಟರ್ ದೂರದಿಂದ ನೋಡಿರುತ್ತೇನೆ. ಹೊನ್ನಾವರದಿಂದ ಗೇರುಸೊಪ್ಪಾಕ್ಕೆ ಹೋಗುವ ರಸ್ತೆಯ ಎಡಬದಿಯಲ್ಲಿ ಅಪಘಾತ ಆಗಿರುತ್ತದೆ. ಅದು ಟಾರ್ ರಸ್ತೆ ಆಗಿರುತ್ತದೆ, ಕಚ್ಚಾ ರಸ್ತೆ ಆಗಿರುವುದಿಲ್ಲ. ಪಂಚನಾಮೆಯಕಾಲಕ್ಕೆ ನಾನೂ ಸಹ ಇದ್ದೆ. ಅಪಘಾತ ಆದ ಸ್ಥಳವನ್ನು ರಸ್ತೆಯ ಎಡಬದಿಯಲ್ಲಿ ಎಂದು ನಾನು ಪೋಲೀಸರಿಗೆ ತೋರಿಸಿದ್ದೇನೆ. ಕಚ್ಚಾ ನಕಾಶೆ ತಯಾರಿಸುವಾಗ ನಾನು ಇರಲಿಲ್ಲ, ನನ್ನ ಅಣ್ಣ ಇದ್ದ. ಚಾಸಾ–7 ನನಗೆ ದೂರದ ಸಂಬಂಧಿಕ. ಗಾಯಾಳುಗಳನ್ನು ಮೊದಲು ನಾವು ಉಪಚರಿಸಿರುತ್ತೇವೆ. ಆ ಕಾಲಕ್ಕೆ ಹತ್ತಿರದಲ್ಲಿದ್ದ ಅಂಗಡಿಯವರು ಬಂದಿರುತ್ತಾರೆ. ಅಪಘಾತ ಆದ ಸ್ಥಳದ ಹತ್ತಿರದಲ್ಲಿ ಒಂದು ಅಂಗಡಿ ಇದೆ. ಬಸ್ಸಿನ ಮುಂಭಾಗದ ಎಡಭಾಗ ಮತ್ತು ಮಧ್ಯದ ಭಾಗ ಓಮಿನಿಯ ಮುಂಭಾಗಕ್ಕೆ ಡಿಕ್ಕಿಪಡಿಸಿರುತ್ತದೆ. ಬಸ್ಸಿನಲ್ಲಿ ಬಹಳಷ್ಟು ಜನ ಪ್ರಯಾಣಿಕರು ಇದ್ದರು. ಬಸ್ಸಿನ ಪ್ರಯಾಣಿಕರು ಅಪಘಾತ ಆದ ನಂತರ ಕೆಳಗೆ ಇಳಿದು ಬಂದಿದ್ದರು. ಅಪಘಾತ ಆದ ನಂತರ ಗೇರುಸೊಪ್ಪಾ ಸಂಚಾರಿ ಪೋಲೀಸರು ವಾಹನಗಳನ್ನು ರಸ್ತೆಯ ಪಕ್ಕಕ್ಕೆ ನಿಲ್ಲಿಸಿದ್ದರು ಎಂದರೆ ಸರಿ. ಆ ಕಾಲಕ್ಕೆ ಪೋಲೀಸರು ಫೋಟೋ ತೆಗೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಬೈಕನಲ್ಲಿ ನಾನು ಹೇಳಿದಂತೆ ಆ ದಿನ ಸಿದ್ದಾಪುರಕ್ಕೆ ಹೋಗುತ್ತಿರಲಿಲ್ಲ ಮತ್ತು ಯಾವುದೇ ಅಪಘಾತವನ್ನು ನೋಡೇ ಇಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನಮ್ಮ ಸಮಾಜದವನಾದ್ದರಿಂದ ಆತನ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ನನಗೆ ಮೊದಲು ಪರಿಚಯ ಇರಲಿಲ್ಲ. ಆದರೆ ಅವರ ಸಂಬಂಧಿಕರು ನನಗೆ ಪರಿಚಯ. ನಾನು ಅಪಘಾತವನ್ನು ಕಣ್ಣಾರೆ ನೋಡದೇ ಇದ್ದರೂ ಪೋಲೀಸರು ಹೇಳಿ ಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**